
INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 15 | ISSUE - 11 | DECEMBER – 2025

# ವಾಲ್ಮೀಕಿ ರಾಮಾಯಣ ಮತ್ತು ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣಂ' : ಕೆಲವು ಒಳನೋಟಗಳು

ಡಾ. ಮಹೇಶ ಫ. ಗಾಜಪ್ಪನವರ
ಸಹ ಪ್ರಾಧ್ಯಾಪಕರು,
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.



**ಕೂಜಂತಂ ರಾಮ ರಾಮೇತಿ,**
**ಮಧುರ ಮಧುರಾಕ್ಷರಮ್ ॥**
**ಆರುಹ್ಯ ಕವಿತಾಶಾಖಾಂ**
**ವಂದೇ ವಾಲ್ಮೀಕಿ ಕೋಕಿಲಮ್॥**

ಈ ಸುಂದರವಾದ ವಾಲ್ಮೀಕಿ ಮುನಿಯನ್ನು ವಂದಿಸುವ ಶ್ಲೋಕವು ಬುಧ ಕೌಶಿಕ ಮುನಿಯು ರಚಿಸಿರುವ ಶ್ರೀ ರಾಮರಕ್ಷಾ ಸ್ತೋತ್ರದಲ್ಲಿದೆ. ಕಾವ್ಯವೆಂಬ ಮರದ ಮೇಲೆ ಕುಳಿತು 'ರಾಮಾ ರಾಮಾ' ಎಂದು (ಕೂಜಂತಮ್ ಹಕ್ಕಿಯ ಇಂಪಾದ ಧ್ವನಿ) ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ವಂದೇ ನಮಸ್ಕಾರ ಎಂದು ಪೂಜನೀಯವಾಗಿರುವ ವಾಲ್ಮೀಕಿ ಕಾವ್ಯಸೃಷ್ಟಿಗೆ ಮೊದಲಿಗನು. ಆದ್ದರಿಂದಲೇ ಈತ ಆದಿಕವಿ ಭಾರತೀಯರಿಗೆ ಈತನೇ ಕವಿಗುರು.

**ವಾಲ್ಮೀಕಿ ಗಿರಿಸಂಭೂತಾ ರಾಮಸಾಗರ ಗಾಮೀನಿ।**
**ಪುನಾತು ಭಾವನಂ ಪುಣ್ಯಾ ರಾಮಾಯಣ ಮಹಾನದಿ॥**

ವಾಲ್ಮೀಕಿ ಗಿರಿಯಿಂದ ಪ್ರಭವಿಸಿ ಸಾವಿರಾರು ಕವಿಗಳ ಪ್ರತಿಭೆಗೆ ಸ್ಫೂರ್ತಿದಾಯಿನಿಯಾಗಿ ಅನಂತಕಾಲದಿಂದಲೂ ಭಾರತ ಭೂಮಿಯನ್ನು ಪಾವನಗೊಳಿಸುತ್ತಿರುವ ಮಹಾನದಿ.

ಜೋಡಿ ಕ್ರೌಂಚ ಪಕ್ಷಿಗಳಲ್ಲಿ ವ್ಯಾಧನ ಬೇಟೆ ಗಂಡು ಕ್ರೌಂಚ ಪಕ್ಷಿಯ ಸಾವು, ಹೆಣ್ಣು ಹಕ್ಕಿಯ ಆಕ್ರಂದನ ಸ್ವರ ವಾಲ್ಮೀಕಿಯ ಮನಸ್ಸನ್ನು ಕದಡಿಸಿದೆ.

**ಮಾ ನಿಷಾದ ಪ್ರತಿಷ್ಠಾ ತ್ವಮಗಮಃ ಶಾಶ್ವತೀಃ ಸಮಾಃ**
**ಯತ್ ಕ್ರೌಂಚಮಿಥುನಾದೇಕಂ ಅವಧಿಃ ಕಾಮ ಮೋಹಿತಂ॥**

ಎಂಬ ಶಾಪ ಶ್ಲೋಕರೂಪವಾಗಿ ರಾಮಾಯಣ ಬರೆಯಲು ಪ್ರೇರಣೆ ನೀಡಿತು. ೨೪೦೦೦ ಶ್ಲೋಕ ರೂಪದಲ್ಲಿ ರಾಮಾಯಣವನ್ನು ಪೂರ್ಣ ಮಾಡಿದನು.

**ಕುರು ರಾಮಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಂ**
**ಯಾವತ್ ಸ್ಥಾಸ್ಯಂತಿ ಗಿರಿಯಃ ಸರಿತಶ್ಚ ಮಹೀತಲೇ**
**ತಾವದ್ರಾಮಾಯಣ ಕಥಾ ಲೋಕೇಶು ಪ್ರಚರಿಷ್ಯತೆ"**

ಶ್ರೀರಾಮನ ಪುಣ್ಯ ಕಥೆಯನ್ನು ಶ್ಲೋಕಗಳಿಂದ ಮನೋಹರವಾಗಿ ಚಿತ್ರಿಸು– ಈ ಭೂಮಿಯಲ್ಲಿ ಪರ್ವತಗಳೂ, ನದಿಗಳೂ ಎಲ್ಲಿಯವರೆಗೆ ಇರುವವೊ, ಅಲ್ಲಿಯವರೆಗೆ ನಿನ್ನ ರಾಮಾಯಣ ಪ್ರಚಾರದಲ್ಲಿರುವುದು' ಎಂದು ಬ್ರಹ್ಮನು ವಾಲ್ಮೀಕಿಯನ್ನೇ ಅನುಗ್ರಹಿಸಿ ರಾಮಾಯಣ ಬರೆಯಲು ಪ್ರೇರೆಪಿಸಿದನು. ಪ್ರಸ್ತುತ ಸಂದರ್ಭದಲ್ಲಿಯೂ ರಾಮಾಯಣ ಪರ್ವತದಂತೆ ಸ್ಥಿರಶಕ್ತಿಯಾಗಿ, ನದಿಯಾಗಿ, ಜೀವದಾಯಿಯಾಗಿ ಜನತೆಯ ಅಂತರಂಗದಲ್ಲಿ ಒಂದು ಅವಿಭಾಜ್ಯ ಸ್ಥಾನವನ್ನುಗಳಿಸಿಕೊಂಡಿದೆ.

ಮಾನವ ಸಂಬಂಧಗಳಲ್ಲಿ ನೂತನವಾದ ವೀರ ಮತ್ತು ದೈವಿ ಸಂದೇಶವನ್ನು ಸಾರುವ ಅಪೂರ್ವ ಕೃತಿ ರಾಮಾಯಣ. ಇದು ರಘುವರ ಚರಿತೆ 'ಸೀತಾಚರಿತೆ' ಪುಲಸ್ತ್ಯವಧೆ ಎಂದೆಲ್ಲಾ ವಾಲ್ಮೀಕಿಯಿಂದ ಹೆಸರಿಸಲ್ಪಟ್ಟಿದ್ದರೂ ಕೊನೆಯಲ್ಲಿ ಉಳಿದ ಹೆಸರು 'ರಾಮಾಯಣ'.

ಇಂತಹ ಮಹಾಕಾವ್ಯವವನ್ನು ಕುರಿತು ಮಾಸ್ತಿಯವರು 'ವಾಲ್ಮೀಕಿಯ ಕಾವ್ಯವನ್ನು ನೋಡಿ ಎಷ್ಟು ಕೋಟಿ ಜೀವಿ ಬೆಳಕನ್ನು ಕಂಡಿತೋ, ಸುಖವನ್ನು ಪಡೆಯಿತೋ, ಬಾಳನ್ನು ಬಿಡುವಂದು ಶಾಂತವಾಗಿ ನಡೆದಿತ್ತು ಎಂದು ಹೇಳಿ ಜನಜೀವನದಲ್ಲಿ ರಾಮಾಯಣ ಬೆರೆತಂತೆ ಇತರ ಕಾವ್ಯಗಳು ಬೆರೆಯಲಿಲ್ಲ. ಈಗಣ ಪ್ರಪಂಚದಲ್ಲಿ ಈ ಅನುಪಮ ಸ್ಥಾನ ಉಳಿದಿರುವುದು ಈ ಒಂದು ಕಾವ್ಯಕ್ಕೆ ಎಂದು ಮೆಚ್ಚುಗೆ ಸೂಸುತ್ತಾರೆ.

ಇನ್ನು ವಿಶ್ವದಲ್ಲಿ ರಾಮಾಯಣಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ರಾಮಾಯಣದ ಕಥೆ ಮತ್ತು ಅದರಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳನ್ನು, ಆದರ್ಶಗಳನ್ನು ಸಂಸ್ಕೃತಿಯ ಹಿರಿಮೆಯನ್ನು ಬೇರೆ ಜನಾಂಗ, ಧರ್ಮ, ನಾಗರಿಕತೆಗಳು ಅದನ್ನು ತಾವು ಕಂಡಂತೆ ಭಾವಿಸಿ – ಕಲ್ಪಿಸಿ – ಅನುಭವಿಸಿ – ಚಿಂತಿಸಿ ಹಾಡಿದ್ದಾರೆ.

ರಷ್ಯಾ, ಜಪಾನ್, ಚೀನಾ, ಬೋಸ್ನಿಯಾ, ಜಾವಾ, ಬಾಲಿ ಮತ್ತು ಇಂಡೋನೇಷಿಯಾಗಳಲ್ಲಿ ರಾಮಾಯಣಕ್ಕೆ ಹೆಸರಿದೆ. ವಿದೇಶಗಳಲ್ಲಿ ರಾಮಾಯಣ ಕುರಿತ ನೃತ್ಯರೂಪಕಗಳು, ಬ್ಯಾಲೆಗಳು ನಡೆದಿವೆ. ಪ್ರಮುಖವಾಗಿ ವಾಲ್ಮೀಕಿ ರಾಮಾಯಣ ಸಂಸ್ಕೃತದಲ್ಲಿ ಇದೆ. ಇಷ್ಟು ವ್ಯಾಪಕವಾದ ಜಾಗತೀಕ ರಾಮಾಯಣಾವತಾರಕ್ಕೆ ರಾಮಕಥೆ ಬೇರೆ ಬೇರೆ ದೇಶದಲ್ಲಿ ಜನಮನದಲ್ಲಿ ಮೂಡಿಸಿದ ಕಲ್ಪನೆಗಳು ಜನಪದ ಗೀತೆ–ಕಥೆಗಳಾಗಿ ಐತಿಹ್ಯಗಳಾಗಿ ಬಾಯಿಂದ ಬಾಯಿಗೆ ಹರಿದು, ಕವಿಗಳಿಂದ ಗ್ರಂಥಸ್ಥವಾಗಿದ್ದೆ ಕಾರಣವೆನ್ನಬಹುದು.

೧೯ನೇ ಶತಮಾನದ ಆರಂಭದಲ್ಲಿ ರಾಮಾಯಣ, ಇಂಗ್ಲಿಷ್ ಫ್ರೆಂಚ್, ಇಟಾಲಿಯನ್ ಭಾಷೆಗಳಲ್ಲಿ ಮೂಡಿಬಂದಿತು. ಹೀಗೆ ಭಾರತದ ಹೊರಗೆ ಇಷ್ಟೊಂದು ಜನಪ್ರಿಯವಾಗಿರುವುದು ಅದರ ಮಹತ್ವಕ್ಕೆ ಮುಖ್ಯವಾಗಿ ಸಾರ್ವಧಾರ್ಮಿಕ ಮೌಲ್ಯಗಳು ಹಾಗೂ ಮಹೋನ್ನತ ಕಾವ್ಯಗುಣ ಕಾರಣವೆನ್ನಬಹುದು.

ಭಾರತದ ಹೊರಗೆ ಇದು ಪ್ರಸಿದ್ಧಿಯಾಗಿರುವಂತೆ ಇದು ಭಾರತದ ಒಳಗೂ ಈ ಕೃತಿ ಅಪಾರ ಜನಪ್ರಿಯತೆ, ಗೌರವವನ್ನು ಗಳಿಸಿದೆ. ತಮಿಳಿನ ಕಂಬ ರಾಮಾಯಣ, ಕನ್ನಡದ ತೊರವೆ ರಾಮಾಯಣ, ಹಿಂದಿಯ ರಾಮಚರಿತ ಮಾನಸ, ಬಂಗಾಳಿಯ ಕೃತ್ತಿವಾಸನ ರಾಮ ಪಾಂಚಾಲಿ ಹಾಗೂ ಆಧುನಿಕ ರಾಮಾಯಣ ಕೃತಿಗಳು ಪ್ರಮುಖವಾಗಿ ಕುವೆಂಪುರವರ ರಾಮಾಯಣ ದರ್ಶನಂ, ವಿಶ್ವನಾಥ ಸತ್ಯನಾರಾಯಣ, 'ಶ್ರೀರಾಮಾಯಣ ಕಲ್ಪವೃಕ್ಷಮು' ಆರ್. ಕೆ. ನಾರಾಯಣ್‌ರ 'ಶ್ರೀ ರಾಮಾಯಣ' ಎಂಬ ಗದ್ಯ ಕೃತಿ ಸರಳವಾಗಿದೆ. ತಮಿಳಿನಲ್ಲಿ ರಾಜಾಜಿಯವರು ಬರೆದ 'ರಾಮಾಯಣ' ಹಲವಾರು ಭಾಷೆಗಳಲ್ಲಿ ಭಾಷಾಂತರಗೊಂಡು ರಾಜಾಜಿ ರಾಮಾಯಣ ಎಂದೇ ಪ್ರಸಿದ್ಧಿ ಪಡೆದಿದೆ. ಮಾಸ್ತಿಯವರ ಶ್ರೀರಾಮ ಪಟ್ಟಾಭಿಷೇಕ, ಶ್ರೀ ವೀರಪ್ಪ ಮೊಯಿಲಿಯವರ ಶ್ರೀರಾಮಾಯಣ ಮಹಾನ್ವೇಷಣಂ' ಹೀಗೆ ಒಬ್ಬೊಬ್ಬರು ತಮ್ಮದೇ ಆದ ರೀತಿಯಲ್ಲಿ ರಾಮಾಯಣ ಪುನರ್‌ರಚಿಸಿದ್ದಾರೆ.

ಅಷ್ಟೇ ಅಲ್ಲ, ವೈದಿಕ, ಬೌದ್ಧ ಹಾಗೂ ಜೈನ ರಾಮಾಯಣಗಳ ಪರಂಪರೆ ಭಾರತ ದೇಶದ ಪ್ರಾದೇಶಿಕ ಭಾಷೆಗಳಲ್ಲಿಯೂ ಇಳಿದು ಬಂದಿದೆ. ಅದರಲ್ಲೂ ಭಾರತೀಯ ಜನರಲ್ಲಿ ರಾಮಾಯಣದ ಬಗ್ಗೆ ಪ್ರೀತಿ, ಗೌರವಗಳು ಹುಟ್ಟಿದುದು ಆಯಾ ಪ್ರದೇಶದ ಭಾಷೆಯಲ್ಲಿ ಹುಟ್ಟಿದ ರಾಮಾಯಣ ಕಾವ್ಯಗಳಿಂದಲೇ.

### ಧರ್ಮ ಸಂಘರ್ಷ :

ಒಂದು ಕಾಲಕ್ಕೆ ಸಂಸ್ಕೃತಕ್ಕಿದ್ದ ವಿಶೇಷ ಸ್ಥಾನಮಾನ, ಗೌರವ, ರಾಜಮನ್ನಣೆ, ರಾಜಾಶ್ರಯಗಳು ಕಡಿಮೆಯಾಗುತ್ತಾ ಬಂದಂತೆ ಆ ಭಾಷೆಯಲ್ಲಿ ಕಾವ್ಯ ರಚನೆ ಬಹುಮಟ್ಟಿಗೆ ನಿಂತುಹೋಯಿತು. ಇದೇ ಸಂದರ್ಭದಲ್ಲಿ ದೇಶ ಭಾಷೆಗಳು ತಮ್ಮ ಸಹಜ ಸ್ಥಾನವನ್ನು ಗಿಟ್ಟಿಸಿಕೊಂಡು ಸಂಸ್ಕೃತದ ಸಾರವನ್ನು ಹೀರಿಕೊಂಡು ಜನಪ್ರಿಯವಾಗಿ ಸಮೃದ್ಧವಾಗಿ ವ್ಯಾಪಕವಾಗಿ ಬೆಳೆಯತೊಡಗಿದವು. ಅದರಲ್ಲಿ ಜೈನಧರ್ಮವೂ ಒಂದು. ಜೈನರು ತಮ್ಮ ಧರ್ಮದ ಪ್ರಸಾರಕ್ಕಾಗಿ ವೈದಿಕ ಕಥೆಗಳನ್ನು ತೆಗೆದುಕೊಂಡು ಅದಕ್ಕೆ ತಮ್ಮ ಧರ್ಮದ ಪರಿವೇಷ ತೊಡಿಸಿದರು. ಸರ್ವ ಜನಾದರಣೀಯವಾಗಿದ್ದ ಈ ಕತೆಗಳ ಮೂಲಕ ತಮ್ಮ ಧರ್ಮ ಪ್ರತಿಪಾದನೆಗೆ ಸೂಕ್ತವಾಗಿ ಮಾಧ್ಯಮವೊಂದು ಅವರಿಗೆ ದೊರಕಿದಂತಾಯಿತು.

ಮೊದಲು ವಿಮಲಸೂರಿ ವೈದಿಕ ರಾಮಾಯಣದಲ್ಲಿನ ವಿಷಯಗಳನ್ನು ಜೈನಧರ್ಮಕ್ಕನುಗುಣವಾಗಿ ತಿದ್ದಲು ತೊಡಗಿದ. ವಾಲ್ಮೀಯ ಕಥೆಗಳಲ್ಲಿ ಹಲವಾರು ವ್ಯತ್ಯಾಸಗಳನ್ನು ಆತ ಮಾಡಿಕೊಂಡ. ಅದು ನಾಗಚಂದ್ರನ ಕಾವ್ಯಕ್ಕೂ ಇಳಿದು ಬಂದಿದೆ.

- ವಾಲ್ಮೀಕಿ ರಾಮಾಯಣ ಹಾಗೂ ನಾಗಚಂದ್ರನ ರಾಮಚಂದ್ರ ಚರಿತ ಪುರಾಣಂ'

**ವಾಲ್ಮೀಕಿ ರಾಮಾಯಣದ ವೈಶಿಷ್ಟ್ಯತೆ :**

- ವಾಲ್ಮೀಕಿ ಬ್ರಹ್ಮನ ಆದೇಶದಂತೆ ೨೪ನೆಯ ಶ್ಲೋಕ ರೂಪದಲ್ಲಿ ರಾಮಾಯಣವನ್ನು ಪೂರ್ತಿ ಮಾಡಿದನು.

ವಾಲ್ಮೀಕಿ ರಾಮಾಯಣದ ಅಂತರ್ಗತವನ್ನು ಒಂದು ಕಾವ್ಯರೂಪದಲ್ಲಿ ಹೇಳುತ್ತಾನೆ –

**ಪೂರ್ವಂ ರಾಮ ತಪೋವನಾಭಿಗಮನಂ**
**ಹೃತ್ವಾಮೃಗಂ ಕಾಂಚನಂ ವೈದೇಹಿ ಹರಣಂ**
**ಜಟಾಯು ಮರಣಂ ಸುಗ್ರೀವ ಸಂಭಾಷಣಂ**
**ವಾಲೀನಿಗ್ರಹಣಂ ಸಮುದ್ರ ತರಣಂ**

**ಲಂಕಾಪುರಿ ದಹನಂ ಪಶ್ಚಾತ್ ರಾವಣ ಕುಂಬಕರ್ಣ ಮಥನಂ ಏತದ್ದಿರಾಮಾಯಣಮ್**

ಶ್ರೀ ರಾಮಾಯಣದ ಪ್ರಮುಖ ಘಟನೆಗಳು ಈ ಶ್ಲೋಕದಲ್ಲಿ ವರ್ಣಿತವಾಗಿವೆ.

೧. ಶ್ರೀರಾಮನು ದಶರಥನ ಮಗನಾಗಿ ಜನಿಸಿದ ನಂತರದಲ್ಲಿ ಅಯೋಧ್ಯೆಯಿಂದ ಅಡವಿಗೆ ತೆರಳಿದರು.
೨. ಬಂಗಾರದ ಜಿಂಕೆಯನ್ನು ಕೊಲ್ಲುವುದು
೩. ರಾವಣನಿಂದ ಸೀತೆಯ ಅಪಹರಣ
೪. ಜಟಾಯುವಿನ ಮರಣ
೫. ರಾಮನು ಸುಗ್ರೀವನೊಡನೆ ಸಂಭಾಷಣೆ ಮಾಡುವುದು
೬. ರಾಮನಿಂದ ವಾಲಿಯ ವಧೆ
೭. ಸಮುದ್ರವನ್ನು ದಾಟುವುದು, ಕಪಿ ಸೈನ್ಯದೊಂದಿಗೆ ಹನುಮಂತನು ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ಲಂಕಾ ಪಟ್ಟಣವನ್ನು ಸುಡುವುದು.
೮. ಕೊನೆಗೆ ರಾವಣ ಕುಂಭಕರ್ಣ ಮೊದಲಾದವರನ್ನು ನಾಶಪಡಿಸುವುದು. ರಾಮಾಯಣದಲ್ಲಿನ ಪ್ರಮುಖ ಘಟನೆಗಳಾಗಿವೆ.

- **ನಾಗಚಂದ್ರನ ರಾಮಚಂದ್ರ ಚರಿತ ಪುರಾಣಂ**
- ಪಂಪ ಯುಗದ ಗಣ್ಯ ಕವಿಗಳಲ್ಲಿ ಒಂದಾದ ನಾಗಚಂದ್ರ ಮಲ್ಲಿನಾಥ ಪುರಾಣಂ ಹಾಗೂ ರಾಮಚಂದ್ರ ಚರಿತ ಪುರಾಣಂ ಎಂಬ ಎರಡು ಕೃತಿಗಳನ್ನು ಬರೆದಿದ್ದಾನೆ. ಇವನ ಕಾಲಘಟ್ಟ ೧೧ನೆಯ ಶತಮಾನದ ಉತ್ತರಾರ್ಧ ಮತ್ತು ೧೨ನೇ ಶತಮಾನದ ಪೂರ್ವಾರ್ಧ

ಕಾಲದ ದೃಷ್ಟಿಯಿಂದ ಪಂಪನ ಅನಂತರ ಬಂದ ನಾಗಚಂದ್ರ ಪಂಪನಿಗಿಂತ ಭಿನ್ನವಾದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ನಾಗಚಂದ್ರನ ಕಾಲದಲ್ಲಿ ಜೈನಧರ್ಮ ಇಳಿಮುಖವಾಗುತ್ತ ಬಂದು ವೀರಶೈವ ಧರ್ಮ ಪ್ರಬಲವಾಗತೊಡಗಿತ್ತು. ಆಗಾಗ ಮತೀಯ ಘರ್ಷಣೆಗಳೂ ನಡೆಯುತ್ತಿದ್ದವು. ಈ ಹಿನ್ನೆಲೆಯಲ್ಲಿ ಜೈನಧರ್ಮವನ್ನು ಮೇಲೆತ್ತುವ ಕೆಲಸವೂ ನಡೆಯಬೇಕಿತ್ತು. ಹಾಗಾಗಿ, ಅಭಿನವ ಪಂಪನೆಂದು ಪ್ರಸಿದ್ಧನಾಗಿದ್ದ ನಾಗಚಂದ್ರ ವಿಮಲಸೂರಿಯ ಪದುಮಚರಿಯನ್ನು ಅನುಸರಿಸಿ ರಾಮಕಾವ್ಯಗಳನ್ನು ಬರೆದಿದ್ದಾರೆ. ಇದು ಪಂಪ ರಾಮಾಯಣವೆಂದು ಪ್ರಸಿದ್ಧವಾಗಿದೆ. ಈ ಕಾವ್ಯವು ಅನೇಕ ಸಂದರ್ಭಗಳಲ್ಲಿ ವಾಲ್ಮೀಕಿಯ ಜಾಡನ್ನು ಅನುಸರಿಸಿದರೂ ಜೈನಧರ್ಮಕ್ಕನುಗುಣವಾಗಿ ಅನೇಕ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಅವು ಈ ಕೆಳಗಿನಂತಿವೆ. –

೧. ರಾಮನು ವಿಷ್ಣುವಿನ ಅವತಾರವಲ್ಲ ಮನುಷ್ಯ, ಧರ್ಮನಾಯಕ, ಅಹಿಂಸಾವೃತಿ. ಲಕ್ಷ್ಮಣ ವೀರನಾಯಕ, ಇವರಿಬ್ಬರೂ ಕಾರಣ ಪುರುಷರು.
೨. ಇಲ್ಲಿ ಅಶ್ವಮೇಧ, ಪುತ್ರಕಾಮೇಷ್ಟಿ ಯಾಗಗಳ ಪ್ರಸ್ತಾವವಿಲ್ಲ. ವಿಶ್ವಾಮಿತ್ರ, ಪರಶುರಾಮ ಮಂಥರೆಯಿಲ್ಲ.
೩. ದಶರಥನ ಪತ್ನಿಯರ ಹೆಸರು ಬದಲಾಯಿಸಲಾಗಿದೆ. ರಾಮನ ತಾಯಿ ಅಪರಾಜಿತೆ. ಶತೃಘ್ನನ ತಾಯಿ ಸುಪ್ರಭೆ, ಸುಮಿತ್ರಗೆ ಲಕ್ಷ್ಮಣನೊಬ್ಬನೇ ಮಗ.
೪. ರಾವಣ ಮುಂತಾದವರು ರಾಕ್ಷಸರಲ್ಲ. ರಾವಣನಿಗೆ ಹತ್ತು ತಲೆಗಳು ಇಲ್ಲ.
೫. ಸ್ವರ್ಣ ಮೃಗದ ವೃತ್ತಾಂತವಿಲ್ಲ.
೬. ಖರ–ಚಂದ್ರನಖಿಯರ ಮಗ ಶಂಭುಕನೆಂಬುವನನ್ನು ಲಕ್ಷ್ಮಣ ಕೊಂದದ್ದೇ ರಾಮ ರಾವಣ ಯುದ್ಧಕ್ಕೆ ಮೂಲಕಾರಣ.
೭. ಲಕ್ಷ್ಮಣನೇ ರಾವಣನನ್ನು ಕೊಲ್ಲುತ್ತಾನೆ.
೮. ಸೀತೆಯು ಲವಕುಶರ ಜನನಾನಂತರ ಅಗ್ನಿಪ್ರವೇಶ ಮಾಡಿ ಜಿನದೀಕ್ಷೆಯನ್ನು ಸ್ವೀಕರಿಸುತ್ತಾಳೆ.

**ವಾಲ್ಮೀಕಿ–ನಾಗಚಂದ್ರನ ಧೋರಣೆಗಳು**

ಪಂಪರಾಮಾಯಣದ ರಾವಣ ಪಾತ್ರವು ವೈಶಿಷ್ಟ್ಯಪೂರ್ಣವಾಗಿದೆ. ಪರಾಂಗನಾವೀರ ತೀವ್ರತನಾದ, ಉದಾತ್ತನಾದ ರಾವಣನು ದುರ್ವಿಧಿವಶದಿಂದ ಸೀತೆಯನ್ನು ಕಾಮಿಸಿ ದುರಂತಕ್ಕೊಳಗಾಗುತ್ತಾನೆ. ಸೀತೆಯ ಅಚಲ ಪತಿಭಕ್ತಿಯನ್ನು ಕಂಡು ಪಶ್ಚಾತ್ತಾಪದಿಂದ ಪುನೀತನಾಗುತ್ತಾನೆ. ರಾವಣನ 'ಉದ್ದಾತ್ತತೆ' ಸಾಹಿತ್ಯದಲ್ಲಿ ಸಾಕಷ್ಟು ಚರ್ಚೆಗೆ ಒಳಗಾಗಿದೆ.

ನಾಗಚಂದ್ರ ವಿಮಲಸೂರಿಯನ್ನು ಅನುಸರಿಸಿದರೂ ತನ್ನ ಕೃತಿಯ ಕಲಾತ್ಮಕತೆಗೆ ಅಡ್ಡಿಯಾಗಿ ಕಂಡು ಬರುವಂತಹ ಅನೇಕ ಭಾಗಗಳನ್ನು ನಾಗಚಂದ್ರ ಕೈಬಿಟ್ಟು ಮಹಾಕಾವ್ಯದ ಮುಖ್ಯ ವಸ್ತುವಿನ ಬೆಳವಣಿಗೆಗೆ, ರಸದೃಷ್ಟಿಗೆ ಎಷ್ಟು ಬೇಕಾಗಬಹುದು ಅಷ್ಟನ್ನು ಉಳಿಸಿಕೊಂಡಿದ್ದಾನೆ. ವಿಭೀಷಣನು ದಶರಥನನ್ನು ಕೊಲ್ಲುವ ಸನ್ನಾಹದಲ್ಲಿರುವುದುನ್ನು ನಾರದನ ಮೂಲಕ ತಿಳಿದ ಮಂತ್ರಿಗಳು ದಶರಥನನ್ನು ರಕ್ಷಿಸಿದುದು ಅದೃಷ್ಟ. ಅವನನ್ನು ಸಾವಿನ ದವಡೆಯಿಂದ ಕೈಕೇಯಿಯನ್ನು ವಿವಾಹವಾಗುವುದರ ಕಡೆಗೆ ಕೊಂಡೊಯ್ಯುವುದು. ಇವು ರಾವಣನ ವಿಧಿಬರಹವನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಹೇಳುವುದರ ಜೊತೆ ಜೊತೆಯಲ್ಲೇ ರಾವಣನನ್ನು ಆ ವಿಧಿಯೊಳಕ್ಕೆ ಬೀಳಿಸುವುದಕ್ಕೆ ಬೇಕಾದ ಮುಂದಿನ ಘಟನೆಗಳಿಗೆ ಒಂದು ಪೀಠಿಕೆಯನ್ನು ಹಾಕಿಕೊಡುತ್ತದೆ. ಈ ಮಧ್ಯೆ ಕೈಕೆಯಿಂದ ರಾಮನ ರಾಜ್ಯಾಭಿಷೇಕ ತಪ್ಪಿದುದಲ್ಲಿ ರಾಮನ ವನವಾಸ, ಲಕ್ಷ್ಮಣನಿಂದ ಶಂಭುಕ ವಧೆ, ಸೀತಾಪಹರಣ, ರಾವಣನ ಅರಮನೆಯ ಉದ್ಯಾನದಲ್ಲಿ ಸೀತೆಯ ದುಸ್ಥಿತಿ ಅದನ್ನು ಕಂಡು ರಾವಣನ ಮನಸ್ಸು ಪರಿವರ್ತನೆಗೊಂಡುದು ಹೀಗೆ ಒಂದರಿಂದೊಂದು ಕಥೆ ಬೆಳೆದುಕೊಂಡು ಹೋಗುತ್ತದೆ. ಈ ಸಂದರ್ಭದಲ್ಲಿ ಕೆಲವು ಸನ್ನಿವೇಶಗಳಲ್ಲಿ ನಾಗಚಂದ್ರ ಉಜ್ವಲವಾದ ಪ್ರತಿಭೆ ಬೆಳಗಿದ್ದಾನೆ. ಮುಖ್ಯವಾಗಿ 'ಪುರಾಣಕಾವ್ಯ'ವನ್ನಾಗಿ ಈ ಕೃತಿಯನ್ನು ರಚಿಸಲು ಹೊರಟಿರುವುದರಿಂದ ಸ್ವಲ್ಪವಾದರೂ 'ಪುರಾಣ'ದ ಅಂಶಗಳಿಗೆ ಬದ್ಧನಾಗುವುದು ಅನಿವಾರ್ಯವಾಯಿತು.

**ಜಗಮಂ ಯುಗಮಂ ಮನ್ವಾ**
**ದಿಗಳಂ ಕಾಲಸ್ವರೂಪಮಂ ಜಿನರಂ ಚ।**
**ಕ್ರಿಗಳಂ ಹಳಧರಕೃಷ್ಣಾ**
**ದಿಗಳಂ ಶ್ರೀರಾಮಚರಿತದೊಳ್ವಿರಚಿಸುವೆಂ ॥ (ರಾ.ಚ.ಪ. ೧–೪)**

ಎಂದು ಪುರಾಣದ ಎಲ್ಲ ಅಂಶಗಳನ್ನು ಬಳಸಿಕೊಂಡು ಕಾವ್ಯವನ್ನು ಬರೆದಿದ್ದರಿಂದ ಮಹಾಕಾವ್ಯಕ್ಕೆ ಅನಗತ್ಯವಾಗಿದ್ದ ನಿರಸ ಭಾಗಗಳನ್ನು ಸೇರಿಸಬೇಕಾಯಿತು.

ಜೈನ ಧರ್ಮ ಇಳಿಮುಖವಾಗುತ್ತಿದ್ದ ಕಾಲದಲ್ಲಿ ಬಂದ ನಾಗಚಂದ್ರ ಧರ್ಮಾಸಕ್ತಿಯಿಂದ ಜೈನ ಧರ್ಮದ ಮಹತ್ವವನ್ನು ಹೇಳುವುದರಲ್ಲಿ ಹೆಚ್ಚಿನ ಗಮನವನ್ನು ಹರಿಸಿದ. ಆದ್ದರಿಂದ ಈತನ ಕೃತಿಯಲ್ಲಿ ಅಂದಿನ ಸಾಮಾಜಿಕ ಪ್ರಜ್ಞೆ ಅಷ್ಟು ಪ್ರಮುಖವಾದ ಸ್ಥಾನವನ್ನು ಪಡೆಯಲಿಲ್ಲ. ಜೈನ ಧರ್ಮಕ್ಕೆ ಸಂಬಂಧಿಸಿದ ಆಚಾರ ನಿಷ್ಠೆಗಳು ಈ ಕಾವ್ಯದಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ವಾಲ್ಮೀಕಿ ರಾಮಾಯಣದ ಕಥೆಯಲ್ಲಿ ಕಂಡು ಬರುವ ದೇಶ ಕಾಲಾತೀತವಾದ ಕೆಲವು ಶಾಶ್ವತ ಮೌಲ್ಯಗಳನ್ನು ನಾಗಚಂದ್ರ ಉಳಿಸಿಕೊಂಡಿದ್ದಾನೆ. ಪಾತಿವ್ರತ್ಯದ ಮಹತ್ವ, ಪಿತೃಭಕ್ತಿ, ಸ್ವಾಮಿಭಕ್ತಿ, ಸೋದರ ವಾತ್ಸಲ್ಯ ಇಂಥವು ರಾಮಾಯಣದಲ್ಲಿರುವಂತೆಯೇ ಉಳಿದುಕೊಂಡು ಬಂದಿದೆ. ಹಾಗೆಯೇ ರಾಮ ಮುಕ್ತಿಯನ್ನು ಪಡೆಯುವ ಹಂತದಲ್ಲಿ ಮಾಡಿದ ಸಾಧನೆ ಗಮನಾರ್ಹವಾದುದು. ಕಾಲಲಬ್ಧಿ, ತಪಸ್ಸಿನ ಆಚರಣೆ, ಉಪಸರ್ಗ ಮೊದಲಾದ ಜೈನರು ಹೇಳುವ ಪರಿಭಾಷೆಗಳನ್ನು ಬಿಟ್ಟರೂ, ಮಾನವ ಮಹತ್ಸಾದನೆಯಲ್ಲಿ ತೊಡಗಿದಾಗ ಎದುರಿಸಬೇಕಾದ ಸಮಸ್ಯೆಗಳೆಂಥದು ಅದನ್ನು ಆತ ಹೇಗೆ ಗಟ್ಟಿಮನಸ್ಸಿನಿಂದ ಎದುರಿಸಬೇಕಾಗುತ್ತದೆ ಎನ್ನುವುದು ಇಲ್ಲಿ ವ್ಯಕ್ತವಾಗಿದೆ. ಯಾವುದೇ ಕ್ಷೇತ್ರದ ಸಾಧನೆಯಲ್ಲಿ ತೊಡಗಿದವನಿಗೆ ಉತ್ತೇಜನ ಕೊಡುವ ರೀತಿಯಾಗಿದೆ. ಈ ಹಿನ್ನೆಲೆಯಲ್ಲಿ ಇದು ಸಮಕಾಲೀನವೂ ಸಾರ್ವಕಾಲಿಕವೂ ಆಗಿ ವಿಶ್ವವ್ಯಾಪ್ತಿಯನ್ನು ಪಡೆಯುತ್ತದೆ.

ವಾಲ್ಮೀಕಿಯಂತೂ ರಾಮಾಯಣದಲ್ಲಿ ಜೀವನ ದರ್ಶನವನ್ನು ಬಹಳ ವ್ಯಾಪಕವಾಗಿ ಚಿತ್ರಿಸುತ್ತಾನೆ. ಒಂದು ಉದಾತ್ತ ಪಾತ್ರ ಚಿತ್ರಣದಿಂದ ಹಿಡಿದು ಸಣ್ಣ ವರ್ಣನೆಯವರೆಗೂ ಜೀವನ ದರ್ಶನವನ್ನು, ಜೀವನಾನುಭವವನ್ನು ಚಿತ್ರಿಸುತ್ತಾನೆ. ವಿಧವಿಧವಾದ ರೀತಿಯಲ್ಲಿ ಮನುಷ್ಯ ಸ್ವಭಾವಕ್ಕೆ ಅಂಟಿದ ದೋಷ ದೌರ್ಬಲ್ಯಗಳನ್ನು ನಿರೂಪಿಸುತ್ತಾ ಅದರಿಂದ ಪಾರಾಗಿ ಮಾನವ ಸ್ವಭಾವವನ್ನು ಹೇಗೆ ಹಸಗೊಳಿಸಕೊಳ್ಳಬೇಕು ಎಂಬುದನ್ನು ವಾಲ್ಮೀಕಿ ಈ ಕಾವ್ಯದಲ್ಲಿ ಎತ್ತಿ ತೋರಿಸುತ್ತಾನೆ. ಈ ದೃಷ್ಟಿಯನ್ನು ನಾಗಚಂದ್ರ ಹಾಗೂ ಇನ್ನುಳಿದ ಕವಿಗಳು ಅಷ್ಟು ಚೆನ್ನಾಗಿ ನಿರೂಪಿಸಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ಕುವೆಂಪು ಅವರು ತಮ್ಮ ಕೃತಿಯಲ್ಲಿ ಮಹಾಕಾವ್ಯವನ್ನು ಕುರಿತಾಗಿ "ನಮ್ಮಲ್ಲಿ ಸಾಹಿತ್ಯ ಎಷ್ಟೇ ಪ್ರಕಾರಗಳಿದ್ದರೂ ಅವೆಲ್ಲವೂ ತನ್ನದೇ ಆದ ವೈಶಿಷ್ಟ್ಯವನ್ನು ಒಳಗೊಂಡಿವೆ. ಇವುಗಳು ಒಂದರ ಅನುಭವವನ್ನು ಮತ್ತೊಂದು ಕೊಡಲಾರವು. ಮಹಾಕಾವ್ಯದ ವಿಶಿಷ್ಟ ಅನುಭವ ಬೇರಾವ ಪ್ರಕಾರಗಳಿಂದಲೂ ನಮಗೆ ದೊರೆಯುವುದಿಲ್ಲ.

ಆದರೂ ರಾಮಾಯಣದಂಥ ಕಾವ್ಯದ ವಸ್ತು ಯಾವ ಕಾಲದ್ದಾದರೇನು; ವಾಲ್ಮೀಕಿ ರಾಮಾಯಣ ಶತಶತಮಾನಗಳಿಂದ ತನ್ನ ಆದರ್ಶ ಮೌಲ್ಯಗಳಿಂದ ನಮ್ಮ ಜೀವನವನ್ನು ತಿದ್ದುತ್ತ ಬಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ರಾಮ–ಲಕ್ಷ್ಮಣರಂಥಹ ಸಹೋದರರು, ಸೀತೆಯಂತಹ ಪತಿವ್ರತೆ, ಹನುಮನ ಸ್ವಾಮಿಭಕ್ತಿ, ಭರತನ ತ್ಯಾಗ ಇವೆಲ್ಲ ಬದುಕಿನ ಎಂತಹ ನಿರುತ್ಸಾಹದ

ಸಂದರ್ಭದಲ್ಲಿಯೂ ಬಾಳಿಗೆ ಬೆಳಕನ್ನು ಸಾಂತ್ವನ, ಎಚ್ಚರವನ್ನು, ಉತ್ಸಾಹವನ್ನು ಪ್ರಚೋದಿಸುತ್ತದೆ. ಇಂತಹ ಮೌಲ್ಯಗಳನ್ನು ಒಳಗೊಂಡ ವಸ್ತು ಆಧುನಿಕ ಯುಗಕ್ಕೂ ಅಗತ್ಯವಾದದ್ದೇ ಆಗಿದೆ ಎಂದು ಹೇಳಬಹುದಾಗಿದೆ.

**ಆಧಾರ ಗ್ರಂಥಗಳು:**


೧. ವಾಲ್ಮೀಕಿ ಮತ್ತು ರಾಮಾಯಣ – ಡಾ. ಜಿ. ಪ್ರಶಾಂತ ನಾಯಕ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೨೦

೨. ವಾಲ್ಮೀಕಿ ವಿಜಯ – ಸಂ. ಡಾ. ರಂಗರಾಜ ವನದುರ್ಗ, ಶ್ರೀ ವಾಲ್ಮೀಕಿ ಗುರುಪೀಠ (ಸ್ಮರಣ ಸಂಚಿಕೆ) ಟ್ರಸ್ಟ್, ದಾವಣಗೇರಿ.

೩. ಶ್ರೀ ರಾಮಾಗುಣಾವತಾರಾಂ–ಡಾ. ಎಂ. ಕೃಷ್ಣಪ್ಪ, ದರ್ಶನ ಪ್ರಕಾಶನ್, ಮಿಚಿಗನ್ (ಯು.ಎಸ್.ಎ.)

೪. ಭುವನದ ಬೆಳಕು ಮಹರ್ಷಿ ವಾಲ್ಮೀಕಿ– ಡಾ. ಅನಸೂಯ ಎಸ್. ಕೆಂಪನಹಳ್ಳಿ, ಮುಖ್ಯ ಪ್ರಾಣ ಪ್ರಕಾಶನ, ಮೈಸೂರು.

೫. ನಾಗಚಂದ್ರ ಕವಿಯ ಪಂಪ ರಾಮಾಯಣ – ಡಾ. ಪಿ. ವಿ. ನಾರಾಯಣ.